## ನಿಮ್ಮೊಡನೆ

# ಜನರೇ ಎಷ್ಟು ತ್ಯಾಗ ಮಾಡೋದು?

**ಬೆಲೆ ಏರಿಕೆಯ ಮೊದಲ ಫಲಾನುಭವಿ ಸರ್ಕಾರ. ಪೆಟ್ರೋಲ್ ಮತ್ತು ಡೀಸೆಲ್‌ನ ಬೆಲೆಯಲ್ಲಿ ಅರ್ಧದಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರದ ತೆರಿಗೆಗಳೇ ಸೇರಿರುತ್ತವೆ. ಒಂದು ಲೀಟರ್ ಪೆಟ್ರೋಲ್‌ನ ಬೆಲೆಯಲ್ಲಿ 35 ರೂಪಾಯಿ ತೆರಿಗೆಯೇ ಇದೆ. ಶೇ 24–26ರಷ್ಟು ಪ್ರಮಾಣದ ಹಣ ವಿವಿಧ ತೆರಿಗೆಗಳ ಹೆಸರಿನಲ್ಲಿ ಕೇಂದ್ರದ ಪಾಲಾದರೆ, ಶೇ 20–25ರಷ್ಟು ಹಣವನ್ನು ರಾಜ್ಯ ಸರ್ಕಾರ ಪಡೆಯುತ್ತದೆ.**

ಅಡುಗೆ ಅನಿಲ ಹಾಗೂ ಡೀಸೆಲ್ ಬೆಲೆ ಏರಿಕೆಯಿಂದಾಗಿ ಅಡುಗೆಮನೆಯಲ್ಲಿ ಮತ್ತೊಮ್ಮೆ ಆತಂಕ ಕಾಣಿಸಿಕೊಂಡಿದೆ. ಊಟದ ಕೋಣೆಯ ಉರಿ ಒಡಲಿಗೂ ಬಯಲಿಗೂ ಹಬ್ಬಲೇಬೇಕಷ್ಟೇ! ಹೀಗೆ, ಪ್ರತಿ ಸಾರಿ ಬೆಲೆ ಏರಿಕೆ ಆದಾಗಲೂ ಅದರ ನೇರ ಪರಿಣಾಮ ಆಗುವುದು ಗೃಹಿಣಿಯ ಮೇಲೆ. ಡಬ್ಬಿಗಳಲ್ಲಿನ ಆಹಾರ ಪದಾರ್ಥಗಳ ಏರಿಳಿತ ಹೊಸತೇನಲ್ಲ. ಆದರೆ, ಒಲೆಯಲ್ಲಿನ ಉರಿಯಲ್ಲಿನ ಅಸಮತೋಲನ ಹೆಚ್ಚು ತೀಕ್ಷ್ಣವಾದುದು.

ಬೆಲೆ ಏರಿಕೆಗೆ ಕೇಂದ್ರ ಸರ್ಕಾರ 'ಆರ್ಥಿಕ ಅಭಿವೃದ್ಧಿಗೆ ವೇಗ ನೀಡುವ' ಕಾರಣ ನೀಡಿದೆ. ಕೇಂದ್ರದ ನಿಲುವನ್ನು ವಿರೋಧಿಸಿ ಪ್ರತಿಪಕ್ಷಗಳು ಬಂದ್ ನಡೆಸಿವೆ. ಬಂದ್‌ನಿಂದಾಗಿ ಸಂಕಟ ಬಗೆಹರಿಯುವುದಿಲ್ಲ ಹಾಗೂ ಬಂದ್‌ನಿಂದ ಉಂಟಾಗುವ ನಷ್ಟ ಜನಸಾಮಾನ್ಯರ ಮೇಲೆಯೇ ಬೀಳುತ್ತದೆ. ಹಾಗಾಗಿ ಬಂದ್ ಅನ್ನು ವಿವೇಕದ ನಡೆಯೆಂದು ಭಾವಿಸುವಂತಿಲ್ಲ. ಸದ್ಯದ ಪ್ರಶ್ನೆ ಇರುವುದು, ಸರ್ಕಾರಗಳ ನೈತಿಕ ಜವಾಬ್ದಾರಿಯ ಬಗ್ಗೆ. ಪ್ರತಿ ಸಲ ಬೆಲೆಗಳು ಏರಿದಾಗಲೂ ಕೇಂದ್ರ ಸರ್ಕಾರ ಸಮಾಧಾನದ ಮಾತನ್ನಾಡಿ ತನ್ನ ಅಸಹಾಯಕತೆ ವ್ಯಕ್ತಪಡಿಸುತ್ತದೆ, ರಾಜ್ಯಗಳು ಪ್ರತಿಭಟನೆ ವ್ಯಕ್ತಪಡಿಸಿ ಸುಮ್ಮನಾಗುತ್ತವೆ. ಆದರೆ, ಈ ಸರ್ಕಾರಗಳು ಮನಸು ಮಾಡಿದಲ್ಲಿ ಬೆಲೆ ಏರಿಕೆಯ ಬಿಸಿಯನ್ನು ಕೊಂಚವಾದರೂ ಶಮನಗೊಳಿಸಲು ಸಾಧ್ಯವಿದೆ.

ಎಕ್ಸೈಜ್ ಮತ್ತು ಕಸ್ಟಂಸ್ ಸುಂಕವನ್ನು ಕೇಂದ್ರ ಸರ್ಕಾರ ಕಡಿತಗೊಳಿಸುವ ಮೂಲಕ ಎಲ್‌ಪಿಜಿ ಸಿಲಿಂಡರ್ ಬೆಲೆ ದೆಹಲಿಯಲ್ಲಿ ನೂರು ರೂಪಾಯಿಯಷ್ಟು ಅಗ್ಗವಾಗಿದೆ. ಇತರೆಡೆಗಳಲ್ಲೂ ಇದಾಗಬೇಕು. ಕೇಂದ್ರದ ಹಣಕಾಸು ಸಚಿವ ಚಿದಂಬರಂ ಪ್ರಕಾರ, 2011–2012ರ ಸಾಲಿನಲ್ಲಿ 1 ಲಕ್ಷ 12 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಎಕ್ಸೈಜ್, ಕಸ್ಟಮ್ಸ್ ಮತ್ತು ವ್ಯಾಟ್‌ಗಳಿಂದ ಸಂಗ್ರಹಿಸಲಾಗಿದೆ. ಇದರಲ್ಲಿ 79, 571 ಕೋಟಿ ರೂಪಾಯಿ ರಾಜ್ಯಗಳ ಪಾಲಾಗಿದೆ. ಈ ಹಣದಲ್ಲಿ ಸ್ವಲ್ಪ ಪ್ರಮಾಣ ಬಿಟ್ಟು ಕೊಡುವುದಾದರೆ ಅಷ್ಟರಮಟ್ಟಿಗೆ ಜನಸಾಮಾನ್ಯರ ಮೇಲಿನ ಹೊರೆ ಕಡಿಮೆ ಆಗಬಹುದು.

ಬೆಲೆ ಏರಿಕೆಯ ಮೊದಲ ಫಲಾನುಭವಿ ಸರ್ಕಾರವೇ ಎನ್ನುವುದು ಗಮನಾರ್ಹ. ಪೆಟ್ರೋಲ್ ಮತ್ತು ಡೀಸೆಲ್‌ನ ಬೆಲೆಯಲ್ಲಿ ಅರ್ಧದಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರದ ತೆರಿಗೆಗಳೇ ಸೇರಿರುತ್ತವೆ. ಒಂದು ಲೀಟರ್ ಪೆಟ್ರೋಲ್‌ನ ಬೆಲೆಯಲ್ಲಿ 35 ರೂಪಾಯಿ ತೆರಿಗೆಯೇ ಇದೆ. ಶೇ 24–26ರಷ್ಟು ಪ್ರಮಾಣದ ಹಣ ವಿವಿಧ ತೆರಿಗೆಗಳ ಹೆಸರಿನಲ್ಲಿ ಕೇಂದ್ರದ ಪಾಲಾದರೆ, ಶೇ 20–25ರಷ್ಟು ಹಣವನ್ನು ರಾಜ್ಯ ಸರ್ಕಾರ ಪಡೆಯುತ್ತದೆ. ಅಂದರೆ, ಪ್ರತಿ ಸಲ ತೈಲ ಬೆಲೆ ಹೆಚ್ಚಾದಾಗಲೂ ಸರ್ಕಾರಗಳ ಗಳಿಕೆ ಏರುತ್ತದೆ.

ತೈಲ ಕಂಪನಿಗಳು ಹಣಕಾಸಿನ ಬಿಕ್ಕಟ್ಟಿನ ಮಾತನಾಡುತ್ತವಾದರೂ, ವರ್ಷದಿಂದ ವರ್ಷಕ್ಕೆ ಅವುಗಳ ಲಾಭಾಂಶ ಹೆಚ್ಚುತ್ತಿದೆ. ತಮ್ಮ ಷೇರುದಾರರಿಗೆ ಅವು ಹೆಚ್ಚಿನ ಲಾಭಾಂಶ ನೀಡುತ್ತಿವೆ. ತೈಲ ಕಂಪನಿಯೊಂದು ತನ್ನ ನಿವೃತ್ತ ಹಾಗೂ ಹಾಲಿ ನೌಕರರಿಗೆ ಚಿನ್ನದ ನಾಣ್ಯಗಳ ಉಡುಗೊರೆ ನೀಡಿದೆ. ಈ ಕಂಪನಿಗಳ ಪಾಲಿಗೆ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಮತ್ತು ಅಡುಗೆ ಅನಿಲಗಳು ಹೆಚ್ಚು ಲಾಭದಾಯಕ ಅಲ್ಲದಿರುವುದು ನಿಜ. ಆದರೆ, ಬೆನ್ಜೀನ್ ಮತ್ತು ಟಾಲ್ಯುಈನ್‌ಗಳಂಥ ಚಿನ್ನದ ತತ್ತಿಗಳ ಕುರಿತು ಅವು ಮಾತನಾಡುವುದಿಲ್ಲ.

ಅಮೆರಿಕಾ, ಕೆನಡಾಗಳಂತಹ ದೇಶಗಳ ಮಾತಿರಲಿ, ನೆರೆಯ ಚೀನಾ, ಪಾಕಿಸ್ತಾನ, ಮಲೇಷಿಯಾಗಳಿಗೆ ಹೋಲಿಸಿದರೂ ಪೆಟ್ರೋಲಿಯಂ ಉತ್ಪನ್ನಗಳು ಭಾರತದಲ್ಲೇ ದುಬಾರಿ. ಇದಕ್ಕೆ ವಿಶ್ವ ಮಾರುಕಟ್ಟೆಗಿಂತಲೂ ಆಂತರಿಕ ನೀತಿ ನಿರೂಪಣೆಗಳಲ್ಲಿನ ನೈತಿಕತೆಯ ಕೊರತೆಯೇ ಕಾರಣ. ಕೇಂದ್ರ ಹಾಗೂ ರಾಜ್ಯ ಬಜೆಟ್‌ಗಳ ಅರ್ಧಕ್ಕೂ ಹೆಚ್ಚು ಭಾಗ ಆಡಳಿತಾತ್ಮಕ ವೆಚ್ಚಗಳಿಗೇ ಸೀಮಿತವಾಗಿರುತ್ತವೆ. ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಿಸುವಲ್ಲಿ ಸ್ಪರ್ಧಾತ್ಮಕ ಮಾರುಕಟ್ಟೆ ಮಾದರಿ ಅನುಸರಿಸುವ ಸರಕಾರ, ತನ್ನದೇ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡಲು ಮುಂದಾಗುವುದಿಲ್ಲ.

'ದಿ ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಆಫ್ ಇಂಡಿಯಾ'ದ ಸಮೀಕ್ಷೆ ಪ್ರಕಾರ, 2006–2006ರಿಂದ 2010–2011ರ ಅವಧಿಯಲ್ಲಿ ಎಂಟು ಜೀವನಾವಶ್ಯಕ ವಸ್ತುಗಳ ಬೆಲೆ ಶೇಕಡಾ 72ರಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಭಾರತದ ಮೆಟ್ರೊ ನಗರಗಳಲ್ಲಿನ ನಾಗರಿಕರ ತಲಾ ಆದಾಯದಲ್ಲಿ ಶೇಕಡಾ 38ರಷ್ಟು ಏರಿಕೆಯಾಗಿದೆ. ಮಹಾನಗರಗಳ ನಾಗರಿಕರ ಆದಾಯ – ಖರ್ಚಿನಲ್ಲೇ ಇಷ್ಟೊಂದು ಅಂತರವಿರುವಾಗ ಗ್ರಾಮೀಣ ಜನರ ಪಾಡೇನು?

ತೆರಿಗೆಗಳನ್ನು ಇಳಿಸುವ ಮೂಲಕ ಸರ್ಕಾರ ಜನಸ್ನೇಹಿ ಆಗಬೇಕು. ತ್ಯಾಗ ಮಾಡುವ ಪಾಳಿ ಪ್ರತಿಸಲವೂ ಜನಸಾಮಾನ್ಯರದ್ದೇ ಆಗಬಾರದು.

■ **ರಘುನಾಥ ಚ.ಹ.**



ವಿಷ್ಣು